# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ:KPTCL/KCO-130/20113/2020-21
ಲಗತ್ತು:

ನಿಗಮ ಕಾರ್ಯಾಲಯ
ಕ.ವಿ.ಪ್ರ.ನಿ.ನಿ ಕಾವೇರಿ ಭವನ
ಬೆಂಗಳೂರು-560009
18 MAY 2020

## ಸುತ್ತೋಲೆ

ವಿಷಯ: ಪಿಂಚಣಿದಾರರ ಕುಟುಂಬ ಭದ್ರತಾ ಠೇವಣಿಯ ವಂತಿಗೆಯನ್ನು ಕಳುಹಿಸುವ ಬಗ್ಗೆ.

ಉಲ್ಲೇಖ: 1. ಕೆಇಬಿ ಆದೇಶ ಸಂಖ್ಯೆ: CCA/DCA/AO(P)/JPA/cys-71 ದಿನಾಂಕ: 26.11.1998.

2. ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಆಸ(ಲೆಕ್ಕಗಳು)/ಲೆ(ಪಿಂ)/ಎಸ್ಎನ್-9/ಸಿವೈಎಸ್-18 ದಿನಾಂಕ: 21.06.2002.

3. ಬ್ಯಾಂಕ್ ಆಫ್ ಬರೋಡ (ಹಿಂದಿನ ವಿಜಯಾ ಬ್ಯಾಂಕ್) ರವರ ಪತ್ರ ಸಂಖ್ಯೆ: VJKGRO2020 ದಿನಾಂಕ: 05.05.2020.

*******

ಕವಿಪ್ರನಿನಿ/ಎಸ್ಕಾಂಗಳಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ ಪಿಂಚಣಿದಾರರಿಗೆ ಕುಟುಂಬ ಹಿತ ಯೋಜನೆಯನ್ನು ರೂಪಿಸುವಲ್ಲಿ ಕವಿಪ್ರನಿನಿ ಪಿಂಚಣಿದಾರರ ಭದ್ರತಾ ನಿಧಿಯ ಖಾತೆಯನ್ನು ತೆರಯಲಾಗಿದ್ದು, ಉಲ್ಲೇಖ-2ರಲ್ಲಿ ಎಲ್ಲಾ ಎಸ್ಕಾಂಗಳ ವಿಭಾಗ ಕಚೇರಿಗಳಿಗೆ ಸುತ್ತೋಲೆಯನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿ ಪಿಂಚಣಿದಾರರ ಮಾಸಿಕ ವಂತಿಗೆಯನ್ನು ಖಾತೆಯ ಮುಖಾಂತರ ಪಾವತಿಸುವಂತೆ ಡಿಡಿ/ಚೆಕ್‌ಗಳ ಮೇಲೆ **ನಿಯಂತ್ರಣಾಧಿಕಾರಿ (ಹಣಕಾಸು)** ಇವರ ಹೆಸರಿನಲ್ಲಿ ಪಡೆದು, ಲೆಕ್ಕಾಧಿಕಾರಿ(ಪಿಂಚಣಿ), ಕವಿಪ್ರನಿನಿ, 7ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇಲ್ಲಿಗೆ ಕಳುಹಿಸುವಂತೆ ಸೂಚಿಸಲಾಗಿರುತ್ತದೆ.

ಪ್ರಸ್ತುತ ಪಿಎಸ್ಎಫ್ ಖಾತೆಯು ವಿಜಯಾ ಬ್ಯಾಂಕ್ (ಈಗ ಬ್ಯಾಂಕ್ ಆಫ್ ಬರೋಡ) ರಲ್ಲಿ ದಿನಾಂಕ: 26.10.2012ರಂದು ತೆರೆಯಲಾಗಿರುತ್ತದೆ. ಬದಲಾದ ಸನ್ನಿವೇಶದಲ್ಲಿ ಬ್ಯಾಂಕ್ ಆಫ್ ಬರೋಡ (ಹಿಂದಿನ ವಿಜಯಾ ಬ್ಯಾಂಕ್) ಉಲ್ಲೇಖ-3ರ ದಿನಾಂಕ: 05.05.2020ರಲ್ಲಿ ಈ ಕಚೇರಿಗೆ ಪತ್ರವನ್ನು ಬರೆದು ಪಿಂಚಣಿದಾರರ ವಂತಿಗೆಯನ್ನು **"KPTCL-Pensioners Security Fund"** ಎಂಬ ಹೆಸರಿನಲ್ಲಿ ಡಿಡಿ/ಚೆಕ್‌ಗಳನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಮೇ-2020ರ ಮಾಹೆಯ ಪಿಂಚಣಿದಾರರ ವಂತಿಗೆಗಳನ್ನು ಜೂನ್-2020ರ ಮಾಹೆಯಲ್ಲಿ ಪಾವತಿಸುವಾಗ ಮತ್ತು ಮುಂದಿನ ಮಾಹೆಗಳಲ್ಲಿ ಖಾತೆಯ ಮುಖಾಂತರ (Account Payee) ಪಾವತಿಸುವಂತೆಯೂ ಹಾಗೂ **"KPTCL-Pensioners Security Fund"** ಎಂಬುದಾಗಿ ಕಡ್ಡಾಯವಾಗಿ ಡಿಡಿ/ಚೆಕ್‌ಗಳಲ್ಲಿ ಬಿಂಬಿಸಿ ಈ ಕಚೇರಿಗೆ ಎಂದಿನಂತೆ ಸಲ್ಲಿಸುವಂತೆ ಕೋರಲಾಗಿದೆ. ಹೀಗೆ ಸೂಚಿಸಿದ ಪಾವತಿದಾರರ ಹೆಸರು ಹೊರತುಪಡಿಸಿ ಬೇರೆ ಯಾವುದೇ ಡಿಡಿ/ಚೆಕ್‌ಗಳನ್ನು ಈ ಕಚೇರಿಯು ಸ್ವೀಕರಿಸುವುದಿಲ್ಲ. ಈ ಸೂಚನೆಗಳನ್ನು ಪಾಲಿಸದ್ದಿದಲ್ಲಿ ಸಂಬಂಧಪಟ್ಟ ವಿಭಾಗಾಧಿಕಾರಿಗಳು ಹೊಣೆಯಾಗಿರುತ್ತಾರೆ

ಆರ್ಥಿಕ ಸಲಹೆಗಾರರು (ಎಸ್‌ಡಿಸಿಜಿಎಸ್)

ಗೆ,

1. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ) ಕವಿಪ್ರನಿನಿ/ಎಸ್ಕಾಂಗಳು.
3. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
5. ಎಲ್ಲಾ ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ ವಿಭಾಗ ಎಸ್ಕಾಂಗಳು.
6. ಲೆಕ್ಕಾಧಿಕಾರಿ, ಎಂ.ಆರ್.ಎಸ್. ಶಿವಮೊಗ್ಗ, ಕವಿಪ್ರನಿನಿ.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ

7. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
8. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂಗಳು.
9. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ಇವರುಗಳ ಆದ್ಯ ಗಮನಕ್ಕಾಗಿ ಹಾಗೂ ಸದರಿ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರ ಗಮನಕ್ಕೆ ತರುವಂತೆ ಕೋರಿದೆ.

www.kptcl.com/eprasarana for information of:

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್. ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೊಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ. ಟಿ.ಎಂ. ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659) ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.